ನೀವು ಮಧ್ಯ ಪ್ರವೇಶ ಮಾಡಿ ಪರವಾಗಿಲ್ಲ. ಈ ಬಗ್ಗೆ ನನಗೆ ಎಲ್ಲಾ ಗೊತ್ತಿದೆ. ನಾನು ಇನ್‌ಚಾರ್ಜ್ ಮಂತ್ರಿಯಾಗಿದ್ದೇನೆ. ಅಲ್ಲಿ ನಾವು ಮೀಟಿಂಗ್ ಮಾಡಿದ್ದೇವೆ. 5–6 ಸಾರಿ ಅವರನ್ನು ಕರೆದಿದ್ದೆವು, ಯಾರ್ಯಾರು ಉಸ್ತುವಾರಿ ಮಂತ್ರಿಗಳಾಗಿದ್ದಾಗ ಎಷ್ಟೆಷ್ಟು ಬಾರಿ ಹೋಗಿದ್ದಾರೆಂದು ನನಗೆ ಚೆನ್ನಾಗಿ ಗೊತ್ತಿದೆ. ಪ್ರತಿಭೆಯನ್ನು ಅಮೇಲೆ ತೋರಿಸೋಣ. ಜಾರ್ಜ್‌ರವರೆ, ನಿಮ್ಮ ಎಲ್ಲಾ ಕೆಲಸಗಳನ್ನು ಮಾಡಿಕೊಟ್ಟಿದ್ದೇವೆ, ಅದನ್ನು ಸಮಾಧಾನಕರವಾಗಿ ಮಾಡುತ್ತಿದ್ದೇವೆ. You must appreciate the government.

ಶ್ರೀ ಕೆ.ಜೆ. ಜಾರ್ಜ್: ಕೆಲಸಗಳು ಆದ ಮೇಲೆ ಮಾಡುತ್ತೇವೆ. ಹೆಚ್‌ಬಿಆರ್ ಲೇಔಟ್‌ನಲ್ಲಿ ಕೆಲಸವನ್ನು ಮಾಡಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಸದಸ್ಯರು ಹೇಳುವುದನ್ನು ನಾನು ಗಮನಿಸಿದ್ದೇನೆ. ನಾವು ಬೆಂಗಳೂರು ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಚಿಂತನೆಯನ್ನು ಮಾಡುತ್ತಿದ್ದೇವೆ. ನೀವು ಹೇಳಿರುವುದನ್ನು ಪರಿಶೀಲನೆ ಮಾಡಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಮಂಡ್ಯ–ಗುತ್ತಲು.ಮುತ್ತತ್ತಿ ಸೇತುವೆ ಕುಸಿದು ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ

52(380) ಶ್ರೀಮತಿ ಕಲ್ಪನಾ ಸಿದ್ದರಾಜು(ಮದ್ದೂರು)
ಶ್ರೀ ಸಿ.ಎಂ.ಉದಾಸಿ.(ಲೋಕೋಪಯೋಗಿ ಸಚಿವರು)

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಮಂಡ್ಯ–ಗುತ್ತಲು–ಮುತ್ತತ್ತಿ ರಸ್ತೆಯ ಗೌಡಯ್ಯನ ದೊಡ್ಡ ರಸ್ತೆ ಮಧ್ಯೆ ಇರುವ ಸೇತುವೆಯು ಕುಸಿದು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ಈ ಸೇತುವೆಯನ್ನು ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಸರ್ಕಾರದ ಆದೇಶ ಸಂಖ್ಯೆ:ಲೋಇ 57 ಸಿಬಿಆರ್ 2009 ದಿನಾಂಕ 27.6.2009ರಲ್ಲಿ 2009–10ನೇ ಸಾಲಿಗೆ ರೂ.80.00 ಲಕ್ಷ ಅನುದಾನ ಸೇತುವೆ ಪುನರ್ ನಿರ್ಮಿಸಲು ಬಿಡುಗಡೆ ಮಾಡಲಾಗಿದೆ.

ಇ) ಸೇತುವೆಯು ಕುಸಿದು ಬಿದ್ದಿರುವುದರಿಂದ ಜನಸಾಮಾನ್ಯರಿಗೆ ಹಾಗೂ ಸಂಚಾರ ವ್ಯವಸ್ಥೆಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ) ಈ ಸೇತುವೆಯ ಕಾಮಗಾರಿಗಾಗಿ ಸರ್ಕಾರ ಅಂದಾಜು ಪಟ್ಟಿ ತಯಾರಿಸಿದೆಯೇ;

ಹೌದು

ಉ) ಹಾಗಿದ್ದಲ್ಲಿ, ಈ ಕಾಮಗಾರಿಗಾಗಿ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಈ ಸೇತುವೆ ಮರುನಿರ್ಮಾಣ ಕಾಮಗಾರಿಗೆ ರೂ.198.00 ಲಕ್ಷ ಅನುದಾನ ನಿಗದಿಪಡಿಸಿರುತ್ತದೆ.

ಊ. ಈ ಕಾಮಗಾರಿಯನ್ನು ಎಂದಿನಿಂದ ಕೈಗೊಳ್ಳಲಾಗುವುದು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಈ ಸೇತುವೆ ಮರುನಿರ್ಮಾಣ ಕಾಮಗಾರಿಗೆ ಟೆಂಡರ್ ಅಧಿಸೂಚನೆಯನ್ನು ದಿನಾಂಕ 27.6.2009ರಂದು ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಿ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀಮತಿ ಕಲ್ಪನಾ ಸಿದ್ದರಾಜು: ಮಾನ್ಯ ಅಧ್ಯಕ್ಷರೆ, ಈ ಸೇತುವೆಯು ಕುಸಿದು 5 ತಿಂಗಳು ಆಗಿದೆ. ಇದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಕಬ್ಬು ಫ್ಯಾಕ್ಟರಿಗೆ ಹೋಗಬೇಕಾದರೆ ಅದೇ ಸೇತುವೆಯ ಮುಖಾಂತರ ರೈತರುಗಳು ಹೋಗಬೇಕು. ಶಾಲಾಕಾಲೇಜುಗಳು ಪ್ರಾರಂಭವಾಗಿರುವುದರಿಂದ ವಿದ್ಯಾರ್ಥಿಗಳು ಮತ್ತು ಜನಸಾಮಾನ್ಯರು ಎಲ್ಲರೂ ಕೂಡ ಅಲ್ಲೇ ಓಡಾಡಬೇಕಾಗಿದೆ. ಬೇರೆ ಕಡೆ ರಸ್ತೆಯನ್ನು ಬಳಸಬೇಕಾದರೆ ಸುಮಾರು 15 ಕಿ.ಮಿ. ಆಗುತ್ತದೆ. ಆದಷ್ಟು ಬೇಗನೆ ಕಾಮಗಾರಿ ಕೆಲಸವನ್ನು ಪ್ರಾರಂಭಿಸಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಮೊದಲನೆ ಪ್ರಶ್ನೆಗೆ ಉತ್ತರ ಬಂದಿದೆ ಎಂದು ಹೇಳುತ್ತಾರೆ. 2ನೇ ಪ್ರಶ್ನೆಯಲ್ಲಿ ಸರ್ಕಾರಿ ಆದೇಶ ಲೋಇ 57 ಸಿಬಿಆರ್ 2009, ದಿನಾಂಕ: 27.6.2009, 2009-10ನೇ ಸಾಲಿಗೆ ರೂ.80.00 ಲಕ್ಷರೂ ಅನುದಾನ ಸೇತುವೆ ಪುನರ್ ನಿರ್ಮಿಸಲು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿಯೇ 5ನೇ ಪ್ರಶ್ನೆಯಲ್ಲಿ 198 ಲಕ್ಷ ರೂಪಾಯಿಗಳ ಅನುದಾನ ನಿಗಧಿಪಡಿಸಿರುತ್ತೇವೆಂದು ಹೇಳುತ್ತೀರಿ ಈಗ 80 ಲಕ್ಷ ರೂಪಾಯಿಗಳು ಅಂದರೆ ಮೂರನೇ ಒಂದು ಭಾಗ ಕೊಟ್ಟಿದ್ದಾರೆ ಎಂಬ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸುತ್ತಾರೆ. ಆದರೆ ಟೆಂಡರ್‌ನ್ನು 27.6.2009ಕ್ಕೆ ಕರೆದಿದ್ದಾರೆ. ಈ ಸೇತುವೆಯೂ ಬಿದ್ದುಹೋಗಿ 5 ತಿಂಗಳುಗಳು ಆಗಿದೆ. ಅಲ್ಲಿ ರೈತರು ಬೆಳೆದಂತಹ ಕಬ್ಬನ್ನು transportation ಮಾಡುವುದಕ್ಕೆ ತೊಂದರೆಯಾಗಿದೆ. ಶಾಲಾಮಕ್ಕಳು ಓಡಾಡುವುದಕ್ಕೆ ತೊಂದರೆಯೂ ಇನ್ನೊಂದು ಕಡೆ ಆಗಿದೆ. ಜನಸಾಮಾನ್ಯರು ಹಳ್ಳಿಯವರು ಹೊರಗಡೆಗೆ ಆ ಕಡೆಯಿಂದ ಈ ಕಡೆಗೆ

ಹೋಗಬೇಕಾದರೆ ಅವರಿಗೂ ಸಹ ತೊಂದರೆಯಾಗಿದೆ. ಇವರು ಟೆಂಡರ್ ಕರೆದು ಬ್ರಿಡ್ಜ್ ಆಗುವುದಕ್ಕೆ ಇನ್ನೊಂದು ವರ್ಷ ಬೇಕಾಗುತ್ತದೆ. ದಯಮಾಡಿ ಕೂಡಲೇ ಸಂಬಂಧಪಟ್ಟಂತಹ ಕಾರ್ಯಪಾಲಕ ಅಭಿಯಂತರರವರಿಗೆ ಡೀವಿಯೇಷನ್ ಬ್ರಿಡ್ಜ್ ಮಾಡಿ ರಸ್ತೆಯನ್ನು ಸುಗಮ ಮಾಡುವುದಕ್ಕೆ ಅವಕಾಶವನ್ನು ಇಷ್ಟು ಹೊತ್ತಿಗೆ ಮಾಡಬೇಕಾಗಿತ್ತು. ಅದಕ್ಕಾಗಿ 5 ತಿಂಗಳ ಕಾಲ ಬೇಕಾಗಿರಲಿಲ್ಲ. ಅವರು ಏನಾದರೂ ಮದ್ದೂರಿನ ಉಪಚುನಾವಣೆಯಲ್ಲಿ ಗೆದ್ದರು ಎನ್ನುವ ಕಾರಣಕೊಸ್ಕರ ನಿಧಾನವಾಗಿದೆಯೇ, ಪಾಪ ಉದಾಸಿಯವರ ಬುದ್ದಿ ಆ ರೀತಿಯಿಲ್ಲ. ಅವರು ಒಳ್ಳೆಯವರೆ, ಒಳ್ಳೆಯ ಸ್ವಭಾವವಿದೆ. ಏಕೆಂದರೆ ಮಾನ್ಯ ಸದಸ್ಯರು ಹೊಸದಾಗಿ ಆಯ್ಕೆಯಾಗಿದ್ದಾರೆ. ಕೂಡಲೇ 15 ದಿವಸದೊಳಗೆ ಡೀವಿಯೇಷನ್ ಬೇಗ ಮಾಡಿ ರೈತರುಗಳು ಕಬ್ಬನ್ನು ತೆಗೆದುಕೊಂಡು ಹೋಗುವುದಕ್ಕೆ, ಶಾಲಾಮಕ್ಕಳು ಓಡಾಡುವುದಕ್ಕೆ, ಜನಸಾಮಾನ್ಯರು ಓಡಾಡುವುದಕ್ಕೆ ಹಾಗೂ ಬಸ್ಸುಗಳು ಓಡಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ ಎಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಮನವಿಯನ್ನು ಮಾಡುತ್ತೇನೆ. ಇದರ ಜೊತೆಗೆ ಅದು ಜಿಲ್ಲಾ ಮುಖ್ಯ ರಸ್ತೆಯಾಗಿದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮದ್ದೂರು ತಾಲ್ಲೂಕಿನ, ಮಂಡ್ಯ-ಗುತ್ತಲು-ಮುತ್ತತ್ತಿ ರಸ್ತೆಯು 14, 10 ಕಿ.ಮೀನಲ್ಲಿ ಕವರ್ ಮಾಡಿರುವಂತಹ ಸೇತುವೆಯಾಗಿದೆ. ಈ ಸೇತುವೆಯು 28.2.2009ದಂದು ಕುಸಿದಿದೆ. ಆದರೆ ಇದು ನೀರಾವರಿ ಇಲಾಖೆಯಿಂದ ನಿರ್ಮಾಣವಾಗಿರುವಂತಹ ಸೇತುವೆಯಾಗಿರುವುದರಿಂದ ನೀರಾವರಿ ಇಲಾಖೆಯವರ ಜೊತೆಗೆ ಮೊದಲು ಸಂಪರ್ಕವನ್ನು ಮಾಡಲಾಗಿತ್ತು. ಆ ಕಾರಣದಿಂದ ಅದು ವಿಳಂಬವಾಗಿ 27.6.2009ಕ್ಕೆ ಟೆಂಡರ್‌ನ್ನು ಕರೆದಿದ್ದೇವೆ. ಆ ಟೆಂಡರ್ ಪ್ರಕ್ರಿಯೆಯೂ 10.7.2009ಕ್ಕೆ ಲಾಸ್ಟ್ ಡೇಟ್ ಇದೆ. 20ನೇ ತಾರೀಖಿಗೆ work order issue ಮಾಡುವಂತಹ ಕೆಲಸವು ನಡೆಯುತ್ತಿದೆ. ಇವತ್ತು 196 ಲಕ್ಷ ರೂಪಾಯಿಗಳಿಗೆ ಸೇತುವೆಗೆ ಟೆಂಡರ್‌ನ್ನು ಕರೆಯಲಾಗಿದೆ. ಅದು ಬೇಗನೆ ಆಗುತ್ತದೆ. ಈ ಮಧ್ಯದಲ್ಲಿ ಸೇತುವೆಯೂ ನಿರ್ಮಾಣ ಆಗುವವರೆಗೆ ಸನ್ಮಾನ್ಯ ರೇವಣ್ಣನವರು ಮಾತನಾಡಿದ ಹಾಗೆ ರೋಡ್‌ನಲ್ಲಿ ಡೀವಿಯೇಷನ್ ರಸ್ತೆಯನ್ನು ಮಾಡಿಕೊಡುವುದರ ಬಗ್ಗೆ ಸೂಕ್ತ ಸಲಹೆಯನ್ನು ಕೊಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ. ಆದರೆ ಅವರು ಒಂದು ಮಾತನ್ನು ಹೇಳಿದರು. ಉದಾಸಿಯವರು ಅಂತಹ ಮನುಷ್ಯರಲ್ಲ ಎಂದು ಹೇಳಬೇಕಾದಾಗ ಈ ಮಾತುಗಳನ್ನು ನನಗೆ ಯಾರೋ ಹೇಳುತ್ತಿದ್ದರು. "ನಮಗೆ ಯಾಕೆ ಬೇಕ್ರಿ ರಾಧವ್ವ ಕದ್ದು ಬಸಿರಾದ ಸುದ್ದಿ "ಅಂತ ನೀರು ಹಿಡಿಯಬೇಕಾದಾಗ ಮಾತನಾಡಿದರಂತೆ. ನಮಗ್ಯಾಕೆ ಬೇಕವ್ವ ಎಂದು ಹೇಳಿಬಿಟ್ಟರೆ ಉದಾಸಿಯವರು ಪೂರ್ವಾಗ್ರಹಪೀಡಿತರಾಗಿ ಮಾತನಾಡಿದರು ಎನ್ನುವ ಉದ್ದೇಶದಿಂದ ಈ ಮಾತನ್ನು ಹೇಳಿದರು ಎನ್ನುವ ಹಾಗೆ ಆಗುತ್ತದೆ. ಆದಕ್ಕಾಗಿ

ನಾನು ಹೇಳುವುದಿಷ್ಟೆ, ನಾನು ಪೂರ್ವಾಗ್ರಹಪೀಡಿತರಾಗುವುದಕ್ಕೆ ಕಾರಣವಿಲ್ಲ. ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದಾಗ ನಿಮ್ಮಿಂದ ನಾನು ಅನೇಕ ವಿಚಾರಗಳನ್ನು ಕಲಿತಿದ್ದೇನೆ. ಹಾಗೆ ಕಲಿತಿರುವುದರಿಂದ ದಾರಿ ತೋರುವ ಪ್ರಯತ್ನವನ್ನು ಮಾಡಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು: ಹಿಂದಿನ ಪಿಡಬ್ಲ್ಯೂಡಿ ಮಿನಿಸ್ಟರ್‌ರವರೆ, ನಿಮಗೂ ಮತ್ತು ಅವರಿಗೂ ಸೇರಿದೆ. ಹಿಂದಿನ ಲೋಕೋಪಯೋಗಿ ಮಂತ್ರಿಗಳು ಮತ್ತು ಇಂದಿನ ಲೋಕೋಪಯೋಗಿ ಮಂತ್ರಿಗಳಿಗೂ ಸೇರಿದೆ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಅವರನ್ನು ಹೊಗಳಿದರೂ ಕೂಡ ಅದನ್ನು ತಪ್ಪು ಗ್ರಹಿಸಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇದು ನೀರಾವರಿ ಇಲಾಖೆಗೆ ಸೇರಿದೆ ಸೇತುವೆ ಎಂದು ಅವರು ಹೇಳುತ್ತಾರೆ. ಆದರೆ ಈ ರಸ್ತೆ ಇರುವುದು ಎಂಡಿಆರ್, Major District Road ಎಂದು ನಾನು ದಯಮಾಡಿ ಅಫರ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಕೂಡಲೇ ಮಾಡಿ, ಅಮೇಲೆ ನನ್ನಿಂದ ಕಲಿತಿರುವುದನ್ನು ಇನ್ನು ಸ್ವಲ್ಪ ಜಾಸ್ತಿ ಮಾಡಲಿ. ನಾನು ಬೇಡವೆಂದು ಹೇಳುವುದಿಲ್ಲ. ಅದಕ್ಕಾಗಿ ದಯಮಾಡಿ ಮಾನ್ಯ ಉದಾಸಿಯವರು ಇದಕ್ಕೆ ಉದಾಸೀನ ಮಾಡುವುದು ಬೇಡ, 15 ದಿವಸದಲ್ಲಿ ಡೀವಿಯೇಷನ್ ರೋಡ್‌ನ್ನು ಮಾಡಿಕೊಡಲಿ.

ಅಧ್ಯಕ್ಷರು: ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ.ಎಂ.ಉದಾಸಿ: ಅತೀ ಶೀಘ್ರದಲ್ಲಿಯೇ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: O.K.

ಶ್ರೀ ರುದ್ರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ನಾನು ಮತನಾಡುತ್ತೇನೆ.

ಅಧ್ಯಕ್ಷರು: ಬೇಡ. ಈಗ ಎಲ್ಲವೂ ಮುಗಿದಿದೆ.

ಶ್ರೀ ರುದ್ರೇಶ್‌ಗೌಡ: ಈ ಬಗ್ಗೆ MDR ನಲ್ಲಿ ಸೇತುವೆ ಹಾಳಾಗಿ ಹೋದಾಗ ನಾವು ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರ ಗಮನಕ್ಕೆ ತಂದಾಗ ರಾಜ್ಯ ಸರ್ಕಾರದವರು ಅಧಿಕಾರವನ್ನು ಕೊಟ್ಟಿರುವುದಿಲ್ಲ. ಇವರಿಗೆ ಪವರ್‌ನ್ನು ಕೊಟ್ಟರೆ Major District Road ನಲ್ಲಿ ಗೋಡೆಗಳು ಕುಸಿದಾಗ, ಸೇತುವೆಗಳು ಹಾಳಾದಾಗ immediate workನ್ನು ತೆಗೆದುಕೊಳ್ಳುವಂತಹ ಅಧಿಕಾರವನ್ನು Superintending Engineerರವರಿಗೆ ಕೊಡಬೇಕೆಂದು ಸನ್ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಹೊಸ ಸೇತುವೆ ನಿರ್ಮಾಣ ಕುರಿತು.

53(599) ಶ್ರೀ.ಸಂಗಮೇಶ್ವರ ಬಿ.ಕೆ.(ಭದ್ರಾವತಿ)